INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -03,May-June, 2026
Page No,01-12
Peer -Reviewed, Refereed Journal

# ಕೆರೆಸಂತೆಯ ಹೊಯ್ಸಳರ ಕಾಲದ ದೇವಾಲಯಗಳು ಮತ್ತು ಶಿಲ್ಪಗಳ ಕುರಿತ ವಿಮರ್ಶಾತ್ಮಕ ವಿಶ್ಲೇಷಣೆ

ಡಾ.ಪಾರ್ವತಮ್ಮ.ಎಂ.[1]

**ಸಾರಾಂಶ:** ಹೊಯ್ಸಳರ ಆಳ್ವಿಕೆಯ ಕಾಲಮಾನದ ಕೆರೆಸಂತೆಯ ದೇವಾಲಯಗಳು ಮತ್ತು ಶಿಲ್ಪಗಳು ಭಾರತೀಯ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಪ್ರಮುಖ ಅಂಶಗಳಾಗಿವೆ. ಈ ಕಾಲಮಾನದಲ್ಲಿ ನಿರ್ಮಿತವಾದ ದೇವಾಲಯಗಳು ಶಿಲ್ಪಕಲೆಯ ಸೌಂದರ್ಯ ಮತ್ತು ತಾಂತ್ರಿಕತೆ ಎರಡರ ಮೇಲೆಯೂ ಅದ್ಭುತ ನೈಪುಣ್ಯವನ್ನು ತೋರಿಸುತ್ತವೆ. ಹೊಯ್ಸಳರು ದೇವಾಲಯಗಳ ನಿರ್ಮಾಣದಲ್ಲಿ ಹೆಚ್ಚು ಗಮನಾರ್ಹ ಶೈಲಿಯನ್ನು ಪ್ರತಿಪಾದಿಸಿದರು. ಅವರ ದೇವಾಲಯಗಳು ಸಾಮಾನ್ಯವಾಗಿ ನಕ್ಷತ್ರಾಕಾರದ ಆಧಾರದಿಂದ ಆರಂಭವಾಗುತ್ತವೆ. ಈ ವಿನ್ಯಾಸವು ದೇವಾಲಯದ ಪ್ರತಿ ಬಗಲಿನಿಂದ ಶಿಲ್ಪಗಳನ್ನು ದೃಶ್ಯಮಾನದಂತೆ ಕಾಣಿಸುತ್ತಿದೆ. ಈ ದೇವಾಲಯಗಳು ಕಲ್ಲಿಗೆ ಶಿಲ್ಪ ಮಾಡುವಲ್ಲಿ ತಾಂತ್ರಿಕ ನಿಪುಣತೆಯನ್ನು ತೋರಿಸುತ್ತವೆ. ದೇವತೆಗಳು, ಯೋಧರು, ನೃತ್ಯಗಾರರು, ಸಂಗೀತಗಾರರು ಮತ್ತು ಪೌರಾಣಿಕ ಕಥೆಗಳ ಚಿತ್ರಣಗಳು ಅತ್ಯಂತ ಸೂಕ್ಷ್ಮವಾಗಿ ಮತ್ತು ವಿವರಣಾತ್ಮಕವಾಗಿ ಶಿಲ್ಪಿತವಾಗಿವೆ. ಕೆರೆಸಂತೆಯಲ್ಲಿಯ ಹೊಯ್ಸಳ ದೇವಾಲಯಗಳು, ವಿಶೇಷವಾಗಿ ಚೆನ್ನಮ್ಮನ ದೇವಾಲಯ, ಕಲ್ಲಿನ ಶಿಲ್ಪಕಲೆ ಮತ್ತು ವಾಸ್ತುಶಿಲ್ಪದ ಸಂಯೋಜನೆಯಿಂದ ವಿಶಿಷ್ಟತೆ ಹೊಂದಿವೆ. ಇಲ್ಲಿ ದೇವಾಲಯಗಳ ವಿನ್ಯಾಸವು ಸಾಂಸ್ಕೃತಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಮಹತ್ವ ಹೊಂದಿದೆ. ದೇವಾಲಯಗಳ ಗೋಲಾಕಾರ ಗೋಪುರಗಳು, ಸುಂದರವಾದ ಬಾಗಿಲುಗಳನ್ನು ಮತ್ತು ಸ್ತಂಭಗಳನ್ನು ಒಳಗೊಂಡಿವೆ. ಶಿಲ್ಪಗಳು ಕೇವಲ ಆಭರಣವಲ್ಲ, ಅವು ಧಾರ್ಮಿಕ ಕಥೆಗಳನ್ನೂ, ಕಾಲಚರಿತ್ರೆಯನ್ನೂ ಪ್ರತಿಬಿಂಬಿಸುತ್ತವೆ. ಹೊಯ್ಸಳ ಕಾಲದ ಕೆರೆಸಂತೆಯ ದೇವಾಲಯಗಳು ಮತ್ತು ಶಿಲ್ಪಗಳು ಭಾರತೀಯ ಶಿಲ್ಪಕಲೆಯ ಅತ್ಯುನ್ನತ ಮಾದರಿಗಳಾಗಿದ್ದು, ಆ ಕಾಲದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಮೌಲ್ಯವನ್ನು ಪ್ರತಿಬಿಂಬಿಸುತ್ತವೆ. ಇವುಗಳು ತಾಂತ್ರಿಕ ನೈಪುಣ್ಯ, ಕಲಾತ್ಮಕ ಸೌಂದರ್ಯ ಮತ್ತು ಧಾರ್ಮಿಕ ಆಳತೆಯ ಸಮನ್ವಯದಿಂದ ವಿಶಿಷ್ಟವಾದ ವಾಸ್ತುಶಿಲ್ಪದ ಉದಾಹರಣೆಗಳಾಗಿವೆ.

[1]. ಸಹಪ್ರಾಧ್ಯಾಪಕರು,ಇತಿಹಾಸ ಅಧ್ಯಯನ ವಿಭಾಗ, ಶ್ರೀ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚೆನ್ನಗಿರಿ, ದಾವಣಗೆರೆ ಜಿಲ್ಲೆ

**ಪ್ರಧಾನ ಪದಗಳು:** ಹೊಯ್ಸಳ ವಾಸ್ತುಶಿಲ್ಪ, ದೇವಾಲಯ ನಿರ್ಮಾಣ, ನಕ್ಷತ್ರಾಕಾರದ ಆಧಾರ, ಶಿಲ್ಪಕಲೆ, ಕಲ್ಲಿನ ಶಿಲ್ಪ, ಪೌರಾಣಿಕ ಕಥೆಗಳು, ಧಾರ್ಮಿಕ ಸಂಕೇತಗಳು, ಗೋಲಾಕಾರ ಗೋಪುರ, ಸ್ತಂಭ ಮತ್ತು ಬಾಗಿಲು ವಿನ್ಯಾಸ, ಸಾಂಸ್ಕೃತಿಕ ಪ್ರತಿಬಿಂಬ, ತಾಂತ್ರಿಕ ನೈಪುಣ್ಯ, ಕಲಾತ್ಮಕ ಸೌಂದರ್ಯ, ಧಾರ್ಮಿಕ ಆಳತೆ, ಕಾಲಚರಿತ್ರೆ, ಪೌರಾಣಿಕ ಶಿಲ್ಪಗಳು.

**ಪೀಠಿಕೆ**

ಕೆರೆಸಂತೆಯ ಹೊಯ್ಸಳರ ಕಾಲದ ದೇವಾಲಯಗಳು ಮತ್ತು ಶಿಲ್ಪಗಳು ಭಾರತೀಯ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ವೈಶಿಷ್ಟ್ಯಪೂರ್ಣ ಮಾದರಿಗಳನ್ನು ಪ್ರತಿಬಿಂಬಿಸುತ್ತವೆ. ಈ ಪ್ರದೇಶದಲ್ಲಿ ನಿರ್ಮಿತವಾದ ದೇವಾಲಯಗಳು ತಮ್ಮ ನಕ್ಷತ್ರಾಕಾರದ ಆಧಾರ ವಿನ್ಯಾಸ, ಸೂಕ್ಷ್ಮ ಶಿಲ್ಪಕಲೆ ಮತ್ತು ಪೌರಾಣಿಕ ಕಥಾನಕಗಳ ಚಿತ್ರಣಗಳಿಂದ ಪ್ರಸಿದ್ಧಿ ಪಡೆದಿವೆ. ಹೊಯ್ಸಳರ ಕಾಲದಲ್ಲಿ ದೇವಾಲಯ ನಿರ್ಮಾಣವು ಕೇವಲ ಧಾರ್ಮಿಕ ಕಾರ್ಯವಲ್ಲದೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕೇಂದ್ರಗಳಾಗಿ ಕಾರ್ಯನಿರ್ವಹಿಸಿತು. ಕೆರೆಸಂತೆಯಲ್ಲಿನ ದೇವಾಲಯಗಳು ವಿಶಿಷ್ಟವಾದ ತಾಂತ್ರಿಕ ನೈಪುಣ್ಯ ಹಾಗೂ ಕಲಾತ್ಮಕ ಸೊಗಡು ಹೊಂದಿದ್ದು, ಗರ್ಭಗೃಹ, ಮಂಟಪ ಮತ್ತು ಗೋಪುರಗಳ ವಿನ್ಯಾಸದಲ್ಲಿ ಹೊಯ್ಸಳರ ವಾಸ್ತುಶಿಲ್ಪದ ಸತ್ವವನ್ನು ಪ್ರತಿಬಿಂಬಿಸುತ್ತವೆ. ಇವುಗಳಲ್ಲಿ ಶಿಲ್ಪಗಳು ದೇವತೆಗಳ, ಯೋಧರು, ನೃತ್ಯಗಾರರು ಮತ್ತು ಪೌರಾಣಿಕ ಕಥೆಗಳ ಸೂಕ್ಷ್ಮ ಹಾಗೂ ವಿಸ್ತೃತ ಚಿತ್ರಣಗಳನ್ನು ಹೊಂದಿವೆ. ಇದು ಆ ಕಾಲದ ಸಮಾಜದ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಳತೆಯನ್ನು ಸೂಚಿಸುತ್ತದೆ. ಆದರೂ, ಇವತ್ತಿನ ದಿನಗಳಲ್ಲಿ ಕೆಲವು ದೇವಾಲಯಗಳು ಮತ್ತು ಶಿಲ್ಪಗಳು ಶಿಥಿಲಗೊಂಡು ನಾಶದ ಅಂಚಿಗೆ ಬಂದಿದ್ದು, ಅವುಗಳ ಸಂರಕ್ಷಣೆ ಮತ್ತು ಅಧ್ಯಯನವು ಅತ್ಯಂತ ಅವಶ್ಯಕವಾಗಿದೆ. ಶಾಸನಗಳು ಮತ್ತು ದೇವಾಲಯಗಳ ಮೂಲಕ ಪ್ರಾಚೀನ ಕಾಲದ ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಜಾಗೃತಿಯನ್ನು ತಿಳಿದುಕೊಳ್ಳಬಹುದು. ಆದ್ದರಿಂದ, ಈ ಐತಿಹಾಸಿಕ ಸಾಂಸ್ಕೃತಿಕ ಸಂಪತ್ತಿನ ರಕ್ಷಣೆಗೆ ಹಾಗೂ ಜನರ ಜಾಗೃತಿ ಮೂಡಿಸಲು ಕ್ರಮಬದ್ಧವಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಕೆರೆಸಂತೆಯ ಹೊಯ್ಸಳರ ಕಾಲದ ದೇವಾಲಯಗಳು ಮತ್ತು ಶಿಲ್ಪಗಳು ನಮ್ಮ ಸಾಂಸ್ಕೃತಿಕ ಪರಂಪರೆಯ ಅಮೂಲ್ಯ ಭಾಗಗಳಾಗಿದ್ದು, ಇವುಗಳ ಸಂರಕ್ಷಣೆ ಹಾಗೂ ಸಂಶೋಧನೆ ನಮ್ಮ ಕಾಲದ ಪ್ರಮುಖ ಹೊಣೆಗಾರಿಕೆ ಎಂಬುದರಲ್ಲಿ ಸಂದೇಹವಿಲ್ಲ.

## ಅಧ್ಯಯನದ ಪ್ರಾಮುಖ್ಯತೆ

ಕೆರೆಸಂತೆ ಪ್ರದೇಶದಲ್ಲಿನ ಹೊಯ್ಸಳ ಕಾಲದ ದೇವಾಲಯಗಳು ಕರ್ನಾಟಕದ ಐತಿಹಾಸಿಕ ಅಧ್ಯಯನದಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿವೆ. ಹೊಯ್ಸಳ ಸಾಮ್ರಾಜ್ಯ ಅವಧಿಯಲ್ಲಿ ನಿರ್ಮಿಸಲಾದ ಈ ದೇವಾಲಯಗಳು ಆ ಕಾಲದ ರಾಜಕೀಯ ವ್ಯವಸ್ಥೆ, ಆಡಳಿತ ಶೈಲಿ ಮತ್ತು

ರಾಜಶಕ್ತಿಯ ಪ್ರತೀಕಗಳನ್ನು ಒಳಗೊಂಡಿವೆ. ದೇವಾಲಯಗಳಲ್ಲಿರುವ ಶಿಲಾಶಾಸನಗಳು ಹಾಗೂ ಶಿಲ್ಪಚಿತ್ರಣಗಳು ಆ ಕಾಲದ ಆಡಳಿತ ವ್ಯವಸ್ಥೆ ಮತ್ತು ರಾಜರ ಧಾರ್ಮಿಕ ಆಶ್ರಯವನ್ನು ಸ್ಪಷ್ಟಪಡಿಸುತ್ತವೆ. ಸಾಮಾಜಿಕ ದೃಷ್ಟಿಯಿಂದ, ಈ ದೇವಾಲಯಗಳು ಜನಜೀವನದ ಪ್ರತಿಬಿಂಬಗಳಾಗಿವೆ. ಶಿಲ್ಪಗಳಲ್ಲಿ ಕಾಣಿಸುವ ನೃತ್ಯ, ಸಂಗೀತ, ಯೋಧರು, ಮಹಿಳೆಯರ ಪಾತ್ರ ಮತ್ತು ಸಾಮಾನ್ಯ ಜನರ ಜೀವನ ಚಿತ್ರಣಗಳು ಆ ಕಾಲದ ಸಮಾಜದ ರಚನೆ ಮತ್ತು ಸಂಸ್ಕೃತಿಯನ್ನು ತಿಳಿಯಲು ನೆರವಾಗುತ್ತವೆ. ಧಾರ್ಮಿಕವಾಗಿ, ದೇವಾಲಯಗಳು ಭಕ್ತಿ ಚಳುವಳಿಯ ವಿಸ್ತಾರಕ್ಕೆ ಮತ್ತು ವೈಷ್ಣವ, ಶೈವ ಪರಂಪರೆಗಳ ಬೆಳವಣಿಗೆಗೆ ಕೇಂದ್ರಗಳಾಗಿದ್ದವು. ಕಲಾತ್ಮಕವಾಗಿ, ಈ ದೇವಾಲಯಗಳು ಭಾರತೀಯ ಶಿಲ್ಪಕಲೆಯ ಉನ್ನತ ಮಟ್ಟವನ್ನು ತೋರಿಸುತ್ತವೆ. ಕೆರೆಸಂತೆ ದೇವಾಲಯಗಳ ಶಿಲ್ಪಕಲೆ, ಬೇಲೂರು ಚೆನ್ನಕೇಶವ ದೇವಸ್ಥಾನ ಮತ್ತು ಹಳೆಬೀಡು ಹೊಯ್ಸಳೇಶ್ವರ ದೇವಸ್ಥಾನದಂತಹ ಪ್ರಸಿದ್ಧ ಹೊಯ್ಸಳ ದೇವಾಲಯಗಳ ಶೈಲಿಯನ್ನು ನೆನಪಿಸುತ್ತದೆ. ಸೂಕ್ಷ್ಮ ಕೆತ್ತನೆಗಳು, ನಕ್ಷತ್ರಾಕಾರದ ವೇದಿಕೆ ಮತ್ತು ಸೌಂದರ್ಯಪೂರ್ಣ ವಿನ್ಯಾಸಗಳು ಹೊಯ್ಸಳ ಕಲೆಯ ವೈಶಿಷ್ಟ್ಯತೆಯನ್ನು ಪ್ರದರ್ಶಿಸುತ್ತವೆ. ಇತಿಹಾಸ, ಪುರಾತತ್ವ ಮತ್ತು ಕಲಾ ಅಧ್ಯಯನದ ದೃಷ್ಟಿಯಿಂದ, ಈ ದೇವಾಲಯಗಳು ಮಹತ್ವದ ಮೂಲಗಳಾಗಿವೆ. ಸಂಶೋಧಕರಿಗೆ ಇವು ನೇರ ಸಾಕ್ಷ್ಯಗಳಾಗಿ ಕಾರ್ಯನಿರ್ವಹಿಸಿ, ಮಧ್ಯಯುಗೀನ ಕರ್ನಾಟಕದ ಜೀವನವನ್ನು ಪುನರ್‌ನಿರ್ಮಿಸಲು ಸಹಕಾರಿಯಾಗುತ್ತವೆ. ಇನ್ನೊಂದೆಡೆ, ಪ್ರವಾಸೋದ್ಯಮದ ಬೆಳವಣಿಗೆಯಲ್ಲಿ ಈ ದೇವಾಲಯಗಳ ಪಾತ್ರವೂ ಗಮನಾರ್ಹವಾಗಿದೆ. ಇವು ದೇಶ–ವಿದೇಶದ ಪ್ರವಾಸಿಗರನ್ನು ಆಕರ್ಷಿಸಿ, ಸ್ಥಳೀಯ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ. ಆದರೆ, ಈ ಅಮೂಲ್ಯ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಕುರಿತು ಗಂಭೀರ ಸವಾಲುಗಳಿವೆ. ಪ್ರಕೃತಿ ಹಾನಿ, ನಿರ್ಲಕ್ಷ್ಯ ಮತ್ತು ಸಮರ್ಪಕ ನಿರ್ವಹಣೆಯ ಕೊರತೆ ಇವುಗಳ ಅಸ್ತಿತ್ವಕ್ಕೆ ಧಕ್ಕೆ ತರುತ್ತಿವೆ. ಕೆರೆಸಂತೆ ಪ್ರದೇಶದಲ್ಲಿನ ಹೊಯ್ಸಳ ಕಾಲದ ದೇವಾಲಯಗಳು ಮತ್ತು ಶಿಲ್ಪಗಳು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಅಮೂಲ್ಯ ಸಂಪತ್ತಾಗಿವೆ. ಅವುಗಳ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಹೊಯ್ಸಳ ಕಲೆಯ ಶ್ರೇಷ್ಠತೆಯನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ, ಇವುಗಳ ಸಂರಕ್ಷಣೆ, ಸಂಶೋಧನೆ ಮತ್ತು ಪ್ರಚಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು ಅನಿವಾರ್ಯವಾಗಿದೆ.

## ಅಧ್ಯಯನದ ಉದ್ದೇಶಗಳು

- ಹೊಯ್ಸಳ ಸಾಮ್ರಾಜ್ಯ ಕಾಲಘಟ್ಟದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳನ್ನು ಕೆರೆಸಂತೆ ದೇವಾಲಯಗಳ ಆಧಾರದಲ್ಲಿ ವಿಶ್ಲೇಷಿಸುವುದು.
- ದೇವಾಲಯಗಳ ವಿನ್ಯಾಸ, ನಕ್ಷತ್ರಾಕಾರದ ವೇದಿಕೆ, ಶಿಲ್ಪಗಳ ಸೂಕ್ಷ್ಮತೆ ಹಾಗೂ ಕಲಾತ್ಮಕ ವೈಶಿಷ್ಟ್ಯತೆಗಳನ್ನು ಅಧ್ಯಯನ ಮಾಡಿ ಹೊಯ್ಸಳ ಶೈಲಿಯ ವಿಶೇಷತೆಗಳನ್ನು ಗುರುತಿಸುವುದು.

- ದೇವಾಲಯಗಳಲ್ಲಿ ಕಂಡುಬರುವ ಶಿಲ್ಪಗಳ ಮೂಲಕ ಆ ಕಾಲದ ಜೀವನಶೈಲಿ, ಸಂಪ್ರದಾಯಗಳು, ಆಚರಣೆಗಳು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಅರಿಯುವುದು.
- ದೇವಾಲಯಗಳ ಸಂರಕ್ಷಣೆ, ಪುರಾತತ್ವ ಮಹತ್ವ ಹಾಗೂ ಪ್ರವಾಸೋದ್ಯಮದ ದೃಷ್ಟಿಯಿಂದ ಅವುಗಳ ಪ್ರಚಾರ ಮತ್ತು ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಗುರುತಿಸುವುದು.

## ಅಧ್ಯಯನದ ಪ್ರಾಕ ಕಲ್ಪನೆಗಳು

- ಹೊಯ್ಸಳ ಸಾಮ್ರಾಜ್ಯ ಅವಧಿಯಲ್ಲಿ ನಿರ್ಮಿತವಾದ ಕೆರೆಸಂತೆ ದೇವಾಲಯಗಳು ಆ ಕಾಲದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯ ನೇರ ಪ್ರತಿಬಿಂಬವಾಗಿವೆ.
- ಕೆರೆಸಂತೆ ಪ್ರದೇಶದ ದೇವಾಲಯಗಳ ಶಿಲ್ಪಕಲೆ ಹೊಯ್ಸಳರ ವಿಶಿಷ್ಟ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಉನ್ನತ ಮಟ್ಟವನ್ನು ಪ್ರತಿನಿಧಿಸುತ್ತದೆ.
- ದೇವಾಲಯಗಳಲ್ಲಿನ ಶಿಲ್ಪಗಳು ಮತ್ತು ಚಿತ್ರಣಗಳು ಆ ಕಾಲದ ಸಾಮಾಜಿಕ ರಚನೆ, ಸಂಸ್ಕೃತಿ ಮತ್ತು ಜೀವನ ಶೈಲಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ.
- ಸಮರ್ಪಕ ಸಂರಕ್ಷಣೆ ಮತ್ತು ಜಾಗೃತಿಯ ಕೊರತೆಯಿಂದ ಕೆರೆಸಂತೆ ದೇವಾಲಯಗಳ ಮೂಲ ಸ್ವರೂಪ ಮತ್ತು ಶಿಲ್ಪಕಲೆ ಹಾನಿಗೊಳಗಾಗುತ್ತಿರುವ ಸಾಧ್ಯತೆಯಿದೆ.

## ಅಧ್ಯಯನದ ವಿಧಾನ

ಈ ಅಧ್ಯಯನವು ಗುಣಾತ್ಮಕ ಮತ್ತು ವಿವರಣಾತ್ಮಕ ವಿಧಾನವನ್ನು ಆಧರಿಸಿಕೊಂಡಿದೆ. ಹೊಯ್ಸಳ ಸಾಮ್ರಾಜ್ಯ ಕಾಲಘಟ್ಟದ ದೇವಾಲಯಗಳು ಮತ್ತು ಶಿಲ್ಪಗಳನ್ನು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಕಲಾತ್ಮಕ ದೃಷ್ಟಿಕೋನಗಳಿಂದ ವಿಶ್ಲೇಷಿಸಲಾಗುತ್ತದೆ. ಪ್ರಾಥಮಿಕ ಮೂಲಗಳಲ್ಲಿ ಕೆರೆಸಂತೆ ಪ್ರದೇಶದ ದೇವಾಲಯಗಳಿಗೆ ಕ್ಷೇತ್ರಭೇಟಿ, ಶಿಲಾಶಾಸನಗಳು ಮತ್ತು ಶಿಲ್ಪಗಳ ನೇರ ಅವಲೋಕನ, ಸ್ಥಳೀಯ ಪಂಡಿತರು, ಪೂಜಾರಿಗಳು ಮತ್ತು ಇತಿಹಾಸಾಸಕ್ತರೊಂದಿಗೆ ಸಂದರ್ಶನ, ದಾಖಲೆ ಸಂಗ್ರಹ. ದ್ವಿತೀಯ ಮೂಲಗಳಲ್ಲಿ ಇತಿಹಾಸ, ಪುರಾತತ್ವ ಮತ್ತು ಕಲೆ ಸಂಬಂಧಿತ ಗ್ರಂಥಗಳು, ಸಂಶೋಧನಾ ಲೇಖನಗಳು, ಜರ್ನಲ್‌ಗಳು, ಸರ್ಕಾರದ ಪುರಾತತ್ವ ಇಲಾಖೆಯ ವರದಿಗಳು, ಪ್ರಸಿದ್ಧ ಹೊಯ್ಸಳರ ದೇವಸ್ಥಾನಗಳನ್ನು ಕುರಿತು ಲಭ್ಯವಿರುವ ಅಧ್ಯಯನಗಳು. ಐತಿಹಾಸಿಕ ವಿಶ್ಲೇಷಣಾ ವಿಧಾನ, ತೌಲಿನಿಕ ವಿಧಾನ, ವಿಮರ್ಶಾತ್ಮಕ ವಿಶ್ಲೇಷಣೆ, ಸಾಂಸ್ಕೃತಿಕ ವಿಶ್ಲೇಷಣೆ. ಈ ಅಧ್ಯಯನವು ಕೆರೆಸಂತೆ ಪ್ರದೇಶದಲ್ಲಿನ ಆಯ್ದ ಹೊಯ್ಸಳ ದೇವಾಲಯಗಳು ಮತ್ತು ಅವುಗಳ ಶಿಲ್ಪಕಲೆಗೆ ಸೀಮಿತವಾಗಿರುತ್ತದೆ. ಇದು ಮುಖ್ಯವಾಗಿ ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ಸಾಂಸ್ಕೃತಿಕ ಅಂಶಗಳ ವಿಶ್ಲೇಷಣೆಗೆ ಒತ್ತು ನೀಡುತ್ತದೆ. ಈ ಅಧ್ಯಯನವು ಕೆರೆಸಂತೆ

ಪ್ರದೇಶದಲ್ಲಿನ ಹೊಯ್ಸಳ ಕಾಲದ ದೇವಾಲಯಗಳು ಮತ್ತು ಶಿಲ್ಪಗಳ ಐತಿಹಾಸಿಕ, ಕಲಾತ್ಮಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸಮಗ್ರವಾಗಿ ಹೊರಹಾಕುತ್ತದೆ ಹಾಗೂ ಸಂರಕ್ಷಣೆ ಅಗತ್ಯತೆಯನ್ನು ಒತ್ತಿ ಹೇಳುತ್ತದೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಕೆರೆಸಂತೆ ಗ್ರಾಮವು ಪ್ರಾಚೀನ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯೊಂದಿಗೆ ಪ್ರಸಿದ್ಧವಾಗಿದೆ. ಈ ಗ್ರಾಮವು ಶಾಶ್ವತವಾಗಿ ಅಗ್ರಹಾರ ವಿಷ್ಣುಸಮುದ್ರ ಎಂದು ಐತಿಹಾಸಿಕವಾಗಿ ಹೆಸರಾಗಿದೆ. ಕ್ರಿ.ಶ 1181ರ ಕಡೂರು ಶಾಸನದಲ್ಲಿ ಅಗ್ರಹಾರ ವಿಷ್ಣುಸಮುದ್ರದ ಮಹಾಜನರು ಸಿದ್ದೇಶ್ವರ ದೇವಸ್ಥಾನದ ಆಡಳಿತವನ್ನು ಶೈವಾಗಮ ವಿಜ್ಞಾನಿಗಳಾದ ಶಿವ ಬ್ರಾಹ್ಮಣ ಲಾಳಾವದಿ ಭಟ್ಟರ ಪೂಜಿಸಿ ದತ್ತಿಬಿಟ್ಟರು ಎಂಬ ವಿವರಗಳನ್ನು ಕಾಣಬಹುದು. ಕೆರೆಸಂತೆಯ ಪ್ರದೇಶದಲ್ಲಿ ಸುಮಾರು 18 ಶಾಸನಗಳು ದೊರೆತಿದ್ದು, ಹೆಚ್ಚಿನವು ದಾನ ಶಾಸನಗಳಾಗಿದ್ದು, ಇವು ಹೊಯ್ಸಳರ ಕಾಲಕ್ಕೆ ಸೇರಿದವು. ಹೊಯ್ಸಳರ ಕಾಲದಲ್ಲಿ ಈ ಗ್ರಾಮವು ಅಗ್ರಹಾರವಾಗಿ ಮಹತ್ವ ಪಡೆದಿದ್ದು, ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಇತಿಹಾಸದಲ್ಲಿ ಪ್ರಸಿದ್ಧವಾದ ಈ ಗ್ರಾಮವು ಇಂದಿಗೂ ತನ್ನ ಸಾಂಸ್ಕೃತಿಕ ಮತ್ತು ಧಾರ್ಮಿಕ ಮಹತ್ವವನ್ನು ಉಳಿಸಿಕೊಂಡಿದೆ. ಆದರೆ ಈಗ ಒಂದು ಸಣ್ಣ ಗ್ರಾಮವಾಗಿ ಉಳಿದಿದೆ. ಈ ವಿವರಗಳು ಕೆರೆಸಂತೆಯ ಪ್ರಾಚೀನ ಇತಿಹಾಸ, ಧಾರ್ಮಿಕ ಪರಂಪರೆ ಮತ್ತು ಹೊಯ್ಸಳರ ಕಾಲದ ಹೆಸರಿನ ಮಹತ್ವವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಈ ಪ್ರದೇಶದ ಇತಿಹಾಸವನ್ನು ತಿಳಿದುಕೊಳ್ಳಲು ಇಲ್ಲಿ ದೊರೆತಿರುವ ಶಾಸನಗಳು ಮತ್ತು ದೇವಾಲಯಗಳು ಅತ್ಯಂತ ಪ್ರಮುಖವಾಗಿವೆ. ಕ್ರಿ.ಶ 1223ರ ಶಾಸನದಲ್ಲಿ ಹೊಯ್ಸಳರ ವೀರನರಸಿಂಹನು ಹಿಮಗಿರಿಯ ಅಥವಾ ವಿಷ್ಣುಸಮುದ್ರದ ಶ್ರೀಲಕ್ಷ್ಮೀನರಸಿಂಹ ದೇವರ ಅಂಗಹೋಗ–ರಂಗಭೋಗ ಸೇವೆಗೆ 12 ಗದ್ಯಾಣ ಮತ್ತು ರಾಜರಾಯಪುರಗೊಂಡ ತೂಬಿನ ಹಿರಿಯ ಕೆರೆಯ ಕೆಳಗೆ ರಾಜಾಯದಲ್ಲಿಯೂ ದತ್ತಿ ನೀಡಿದ್ದನು ಎಂದು ಉಲ್ಲೇಖವಾಗಿದೆ. ಅಲ್ಲದೆ, ಅಮ್ಮನ ಅಮ್ಮಣ್ಣ ಗೋಪಾಲ ದಂಡನಾಯಕರು ಹಿಮಗಿರಿಯ ಲಕ್ಷ್ಮೀನರಸಿಂಹದೇವರ ಅಮೃತಪಟ್ಟಿಗೆ 5 ಗದ್ಯಾಣ ದತ್ತಿ ನೀಡಿದ್ದು, ರಾಜಗುರು ಆದಿತ್ಯ ಭಟ್ಟೆಯರ ತಂಗಿ ಅಭಯಕ್ಕನು ಮತ್ತು ಇತರರು ಕೂಡ ದತ್ತಿ ನೀಡಿದರೆಂಬ ಮಾಹಿತಿ ದೊರಕುತ್ತದೆ. ಈ ಶಾಸನಗಳು ಮತ್ತು ದೇವಾಲಯಗಳಿಗೆ ನೀಡಲಾದ ದಾನ–ದತ್ತಿಗಳಿಂದ ಈ ಪ್ರದೇಶದಲ್ಲಿ ಹತ್ತಾರು ದೇವಾಲಯಗಳಿದ್ದವು ಎಂದು ತಿಳಿಯುತ್ತದೆ. ಆದರೆ ಇತ್ತೀಚೆಗೆ ಈ ದೇವಾಲಯಗಳು ಶಿಥಿಲಗೊಂಡು ಗುರುತಿಸುವುದು ಸ್ವಲ್ಪ ಕಷ್ಟವಾಗಿ ಬಿದ್ದುದು, ಆದರೂ ಇತಿಹಾಸ ಮತ್ತು ಧಾರ್ಮಿಕ ಮಹತ್ವವನ್ನು ನಾವು ಈ ಶಾಸನಗಳ ಮೂಲಕ ತಿಳಿದುಕೊಳ್ಳಬಹುದು. ಈ ರೀತಿಯ ಶಾಸನಗಳು ಮತ್ತು ದಾನದ ದಾಖಲೆಗಳು ಕರ್ನಾಟಕದ ಹೊಯ್ಸಳರ ಕಾಲದ ಧಾರ್ಮಿಕ, ಸಾಂಸ್ಕೃತಿಕ ಜೀವನವನ್ನು ಅಧ್ಯಯನ ಮಾಡಲು ಅಮೂಲ್ಯ ಸಾಕ್ಷ್ಯಗಳಾಗಿವೆ.

ಕೆರೆಸಂತೆಯ ವಿಷ್ಣುಸಮುದ್ರ ಮತ್ತು ಹಿಮಗಿರಿ ಪರ್ವತದ ಇತಿಹಾಸ ಪ್ರಸಿದ್ಧ ದೇವಾಲಯಗಳು ಮತ್ತು ಶಿಲ್ಪಿಗಳ ಬಗೆಗೆ ಕೆಲವು ಪ್ರಮುಖ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅವುಗಳೆಂದರೆ;

**ದೇವಾಲಯಗಳು**

ಭಾರತದ ಪ್ರತಿಯೊಂದು ಹಳ್ಳಿ, ನದಿ ದಡ, ಬೆಟ್ಟದ ಮೇಲೆ ಅಥವಾ ಊರಿನ ಮಧ್ಯಭಾಗದಲ್ಲಿ ದೇವಾಲಯಗಳು ಕಾಣಿಸಿಕೊಳ್ಳುತ್ತವೆ. ಅವುಗಳಲ್ಲಿ ಇರುವ ಮೂರ್ತಿಗಳು ವಿಭಿನ್ನವಾಗಬಹುದು, ಆದರೆ ಎಲ್ಲ ದೇವಾಲಯಗಳ ಆರಾಧನೆಯೇ ಪ್ರಧಾನ ಉದ್ದೇಶವಾಗಿರುತ್ತದೆ. ಈ ಕಾರಣದಿಂದ ದೇವಾಲಯಗಳನ್ನು ಸಾರ್ವಜನಿಕ ಪೂಜಾ ಮಂದಿರಗಳು ಎಂದು ಪರಿಗಣಿಸಲಾಗುತ್ತದೆ. ಪ್ರಾಚೀನ ಕಾಲದಲ್ಲಿ ದೇವಾಲಯಗಳು ಕೇವಲ ಧಾರ್ಮಿಕ ಸ್ಥಳಗಳೇ ಅಲ್ಲದೆ, ಸಮಾಜದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿದ್ದರು. ಅವುಗಳು ನಾಡಿನ ಆಡಳಿತ, ಸಾಂಸ್ಕೃತಿಕ ಚಟುವಟಿಕೆಗಳು, ಕಲಾ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಭೆಗಳ ಕೇಂದ್ರವಾಗಿದ್ದು, ಜನಸಮುದಾಯದ ಏಕತೆ ಮತ್ತು ಪರಂಪರೆಯ ಸಾರವನ್ನು ಹೊತ್ತಿರುತ್ತವೆಯೆಂದು ಹೇಳಬಹುದು. ವಿಷ್ಣುಸಮುದ್ರದ ಶಾಸನಗಳಲ್ಲಿ ಲಕ್ಷ್ಮೀನರಸಿಂಹ, ಸಿದ್ದೇಶ್ವರ ಸ್ವಾಮಿ, ಶಂಭುಲಿಂಗ ಸ್ವಾಮಿ, ಮಂಚೇಶ್ವರ, ಈಶ್ವರ, ನಕರೇಶ್ವರ, ಜನಾರ್ದನಸ್ವಾಮಿಯಂತಹ ದೇವಾಲಯಗಳ ಉಲ್ಲೇಖಗಳಿವೆ. ಇವುಗಳಲ್ಲಿರುವ ದೇವಾಲಯಗಳು ವಿಷ್ಣುಸಮುದ್ರ ಹಾಗೂ ಸುತ್ತಲೂ ಸ್ಥಾಪಿತವಾಗಿದ್ದು, ಬಹುಶಃ ಬಹಳ ಸುಂದರವಾಗಿದ್ದವು. ಆದರೆ ಪ್ರಸ್ತುತ ಅವು ಶಿಥಿಲಗೊಂಡಿದ್ದು, ಇವುಗಳ ಸ್ತರವನ್ನು, ವಿನ್ಯಾಸವನ್ನು ಗುರುತಿಸುವುದು ಮತ್ತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಈ ದೇವಾಲಯಗಳ ಅಧ್ಯಯನವು ಪ್ರಾಚೀನ ಧಾರ್ಮಿಕ, ಸಾಂಸ್ಕೃತಿಕ ಮತ್ತು ವಾಸ್ತುಶಿಲ್ಪ ವೈಶಿಷ್ಟ್ಯತೆಗಳನ್ನು ತಿಳಿದುಕೊಳ್ಳಲು ಮಹತ್ವದಾಗಿದೆ. ಇವುಗಳ ಬಗೆಗೆ ಸಮಗ್ರ ಮಾಹಿತಿ ಸಂಗ್ರಹಿಸುವುದು ಮತ್ತು ಸಂರಕ್ಷಣೆಗೆ ಪ್ರೇರಣೆ ನೀಡುವ ಕಾರ್ಯ ಅತ್ಯಗತ್ಯವಾಗಿದೆ.

**ಜನಾರ್ದನ ಸ್ವಾಮಿ ದೇವಾಲಯ**

ಹಿಮಗಿರಿಯ ಬೆಟ್ಟದ ಬಲಭಾಗದಲ್ಲಿ ನಾಲ್ಕು ಶಿಥಿಲಗೊಂಡ ದೇವಾಲಯಗಳಿದ್ದು, ಅವುಗಳಲ್ಲಿ ಒಂದು ಜನಾರ್ದನ ಸ್ವಾಮಿ ದೇವಾಲಯವಾಗಿದೆ. ಈ ದೇವಾಲಯವು ಗರ್ಭಗೃಹ, ರಂಗಮಂಟಪ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿ ಕಾಣಿಸುವುದಿಲ್ಲ. ಆದರೆ ರಂಗಮಂಟಪದಲ್ಲಿ 16 ಕಂಬಗಳಿವೆ. ಆ ಕಂಬಗಳಲ್ಲಿ ಎರಡು ಕಂಬಗಳು ಒಂದೇ ರೀತಿಯ ಚಿತ್ರಕಲೆಯೊಂದಿಗೆ ಸುಂದರವಾಗಿ ಕೆತ್ತಲ್ಪಟ್ಟಿವೆ. ಮಧ್ಯದ ಭಾಗದಲ್ಲಿ ಭುವನೇಶ್ವರ ವಿಗ್ರಹವಿದ್ದು, ಅದರ ಬಳಿ ನೃತ್ಯಭಂಗಿಯಲ್ಲಿ ಒಂದು ಶಿಲ್ಪವಿದೆ. ಆದರೆ ಅದು ಯಾವ ದೇವತೆಯ ಶಿಲ್ಪ ಎಂದು ಗುರುತಿಸುವುದು ಸವಾಲಾಗಿದ್ದು ಕಷ್ಟಕರವಾಗಿದೆ. ದೇವಾಲಯದ ಎಡಭಾಗದಲ್ಲಿ ಶಾಸನವಿದ್ದು, ದೇವಾಲಯದ

ಅಂಗಭೋಗ ಮತ್ತು ರಂಗಭೋಗಕ್ಕೆ ದಾನ ನೀಡಿರುವುದು ದಾಖಲಿಸಲಾಗಿದೆ. ದೇವಾಲಯವು ಪೂರ್ವಕ್ಕೆ ಮುಖಮಾಡಿದ್ದು, ಸ್ವಲ್ಪ ದೂರದಲ್ಲಿ ದ್ವಾರಮಂಟಪವಿದ್ದು ಅದು ಸಂಪೂರ್ಣವಾಗಿ ಶಿಥಿಲಗೊಂಡಿದೆ. ದ್ವಾರಮಂಟಪದ ಬಲಭಾಗದಲ್ಲಿ ಗಣಪತಿ ವಿಗ್ರಹವಿದ್ದು, ಕೆಲವು ವಿಶೇಷ ದಿನಗಳಲ್ಲಿ ಗ್ರಾಮಸ್ಥರು ಇಲ್ಲಿ ಪೂಜಾ ವಿಧಿವಿಧಾನಗಳನ್ನು ನಡೆಸುತ್ತಿರುವುದು ಕಾಣಸಿಗುತ್ತದೆ. ದೇವಾಲಯದ ಮುಂದೆ ಮತ್ತೊಂದು ದೇವಾಲಯವಿದ್ದು, ಅದು ಕೂಡ ಸಂಪೂರ್ಣವಾಗಿ ಶಿಥಿಲಗೊಂಡಿದೆ ಮತ್ತು ಗರ್ಭಗೃಹದಲ್ಲಿ ಯಾವುದೇ ಮೂರ್ತಿಯಿಲ್ಲದಿರುವುದರಿಂದ ಅದರ ಹೆಸರು ಮತ್ತು ಪುರಾತನತೆ ಕುರಿತು ಇನ್ನಷ್ಟು ಅಧ್ಯಯನ ಮತ್ತು ಸಂಶೋಧನೆ ಮಾಡುವ ಅಗತ್ಯವಿದೆ. ಈ ದೇವಾಲಯಗಳು ಹೊಯ್ಸಳ ಶಿಲ್ಪಕಲೆಯ ಸೂಕ್ಷ್ಮತೆಯನ್ನು ಹಾಗೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪ್ರತಿಬಿಂಬಿಸುತ್ತವೆ. ಇವುಗಳ ಸಂರಕ್ಷಣೆ ಮತ್ತು ಅಧ್ಯಯನವು ಈ ಪ್ರದೇಶದ ಐತಿಹಾಸಿಕ ಮೌಲ್ಯವನ್ನು ಉಳಿಸುವುದರಲ್ಲಿ ಮಹತ್ವಪೂರ್ಣವಾಗಿದೆ.

ಜನಾರ್ದನ ದೇವಾಲಯದ ಎಡಭಾಗದಲ್ಲಿ ಮತ್ತೊಂದು ಶಿಥಿಲಗೊಂಡ ದೇವಾಲಯವಿದ್ದು, ಅದು ಗರ್ಭಗೃಹ ಮತ್ತು ನವರಂಗವನ್ನು ಒಳಗೊಂಡಿದೆ. ಈ ದೇವಾಲಯದ ಬಾಗಿಲು ಸುಂದರ ಕೆತ್ತನೆಯಿಂದ ಅಲಂಕೃತವಾಗಿದ್ದು, ಬಾಗಿಲಿನ ಮೇಲೆ ಚಿಕ್ಕ ಚಿಕ್ಕ ಶಿಲ್ಪಗಳು ಕಾಣಿಸುತ್ತವೆ. ಆದರೆ ಒಳಭಾಗವನ್ನು ಪ್ರವೇಶಿಸಲು ಸಾಧ್ಯವಾಗದ ಕಾರಣ, ಈ ದೇವಾಲಯದ ನಿಖರವಾದ ಹೆಸರು ಗುರುತಿಸುವುದು ಕಷ್ಟಕರವಾಗಿದೆ. ಶಾಸನದಲ್ಲಿ ಬಸದಿಗೆ ದಾನ ನೀಡಿದ್ದುದಾಗಿ ಉಲ್ಲೇಖವಿರುವುದು ಮತ್ತು ದೇವಾಲಯದ ಒಳಭಾಗದಲ್ಲಿ ತೀರ್ಥಂಕರರ ಶಿಲ್ಪಗಳಿರುವುದರಿಂದ, ಈ ದೇವಾಲಯವು ಜೈನಬಸದಿ ಆಗಿರುವ ಸಾಧ್ಯತೆ ಇದೆ. ಪ್ರಸ್ತುತವಾಗಿ ಈ ಸ್ಥಳ ನೆಲಸಮಗೊಂಡಿರುವುದು ದೇವಾಲಯದ ಸ್ಥಿತಿಯನ್ನು ಮತ್ತಷ್ಟು ಪಾರದರ್ಶಕಗೊಳಿಸುತ್ತದೆ. ಈ ರೀತಿಯ ಶಾಸನಗಳು ಮತ್ತು ಶಿಲ್ಪಗಳು ಈ ಪ್ರದೇಶದ ಧಾರ್ಮಿಕ ವೈವಿಧ್ಯತೆ ಮತ್ತು ಐತಿಹಾಸಿಕ ಮಹತ್ವವನ್ನು ತಿಳಿಸುವ ಅಮೂಲ್ಯ ದಾಖಲೆಗಳಾಗಿವೆ. ಈ ದೇವಾಲಯಗಳ ಸಂರಕ್ಷಣೆ ಮತ್ತು ಸಂಪೂರ್ಣ ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

## ಮೂರ್ತಿ ಶಿಲ್ಪಗಳು

ಹಿಮಗಿರಿಯ ಬೆಟ್ಟದ ಮೇಲೆ ಏರುವ ಮೆಟ್ಟಿಲುಗಳ ಹತ್ತಿರದ ಬಲಭಾಗದಲ್ಲಿ ಒಟ್ಟು 21 ಶಿಲಾಮೂರ್ತಿಗಳನ್ನು ಸಂಗ್ರಹಿಸಲಾಗಿದೆ. ಕೆಲವೊಂದು ಶಿಲ್ಪಗಳು ಶಿಥಿಲಗೊಂಡಿವೆ ಮತ್ತು ಅವುಗಳ ಸ್ಥಿತಿ ನಿಜಕ್ಕೂ ನಜೂಕಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಈ ಶಿಲ್ಪಗಳು ಪ್ರಾಚೀನ ಶಿಲ್ಪಕಲೆ ಮತ್ತು ಧಾರ್ಮಿಕ ಭಾವನೆಯನ್ನು ಪ್ರತಿಬಿಂಬಿಸುವ ಅಮೂಲ್ಯ ಸಾಕ್ಷ್ಯಗಳಾಗಿವೆ. ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಮಾಹಿತಿಯನ್ನು ಸಂಗ್ರಹಿಸಿರುವುದು ಬಹುಮುಖ್ಯ, ಏಕೆಂದರೆ ಸ್ಥಳೀಯ ಅಧ್ಯಯನ ಮತ್ತು ವೀಕ್ಷಣೆಗಳಿಂದ ದೊರೆತ ಮಾಹಿತಿ ಇತಿಹಾಸದ ನಿಖರತೆ ಮತ್ತು ಸಂಪೂರ್ಣತೆಯನ್ನು ಹೆಚ್ಚಿಸುತ್ತದೆ. ಈ ಶಿಲ್ಪಗಳ

ಸೂಕ್ಷ್ಮತೆಯ ವಿಶ್ಲೇಷಣೆ ಮತ್ತು ಸಮಗ್ರ ಸಂಶೋಧನೆವು ಹೊಯ್ಸಳ ಕಾಲದ ಶಿಲ್ಪಕಲೆ, ಧಾರ್ಮಿಕ ಆಚಾರಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ತಿಳಿಯಲು ಸಹಾಯಮಾಡುತ್ತದೆ. ಹೀಗೆ ಸಂಗ್ರಹಿಸಿದ ಮತ್ತು ಅಧ್ಯಯನ ಮಾಡಿದ ಮಾಹಿತಿಗಳು ಈ ಪ್ರದೇಶದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಮಹತ್ವಪೂರ್ಣ ಕೊಡುಗೆ ನೀಡುತ್ತವೆ.

## ಭೈರವ ಮೂರ್ತಿ

ಭೈರವ ಮೂರ್ತಿಯು ಪೀಠದ ಮೇಲೆಯೇ ನಗ್ನ ಸ್ಥಿತಿಯಲ್ಲಿ ಸ್ಥಾಪಿತವಾಗಿದೆ ಮತ್ತು ಸ್ಥಾನಿಕ ರೂಪವನ್ನು ಹೊಂದಿದೆ. ಮೂರ್ತಿಯು ನಾಲ್ಕು ಕೈಗಳನ್ನು ಒಳಗೊಂಡಿದೆ. ಮೇಲಿನ ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದಿದ್ದು, ಮೇಲಿನ ಎಡಗೈಯಲ್ಲಿ ಡಮರು (ಡೊಳ್ಳು) ಇದೆ. ಕೆಳಗಿನ ಎಡಗೈಯಲ್ಲಿ ಕಪಾಲವನ್ನು ಹಿಡಿದಿದ್ದು, ಕೆಳ ಬಲಗೈಯಲ್ಲಿ ಕಪಾಲದ ಕೆಳಗಡೆ ರುಂಡವೊಂದು ಕಾಣಸಿಗುತ್ತದೆ. ಭೈರವನ ಕಿವಿಯಲ್ಲಿ ಸರ್ಪ ಕುಂಡಲವಿದ್ದು, ಕೊರಳಿನಲ್ಲಿ ಹಲವಾರು ಬಗೆಯ ಹಾರಗಳು ಅಲಂಕರಿಸಿರುವುದನ್ನು ನೋಡಬಹುದು. ರುಂಡಮಾಲೆಯ ಸರವು ಮೊಣಕಾಲದವರೆಗೆ ಇಳಿದಿದ್ದು, ಸರ್ಪಕೆಯೂರ (ಉದರ ಭಾಗ) ಹಾಗೂ ಕೈ ಮತ್ತು ಕಾಲಗಳಲ್ಲಿ ಪಾದರಕ್ಷೆಗಳಿವೆ. ಮೊಣಕಾಲಿನ ಸುತ್ತ ಸರ್ಪವು ಸುತ್ತುವರಿದಿರುವುದು ವಿಶೇಷವಾಗಿದೆ. ಕಾಲಿನ ಎಡಬದಿಯಲ್ಲಿ ಪ್ರೇತ ಶಿಲ್ಪ ಮತ್ತು ಬಲಬದಿಯಲ್ಲಿ ಶ್ರೀಶಿಲ್ಪವಿದ್ದು, ಪ್ರಭಾವಳಿಯ ಭಾಗದಲ್ಲಿ ಸಿಂಹ ಲಾಟವು ಮತ್ತು ಸುಂದರ ಚಿತ್ರಕೆತ್ತನೆಯೂ ಕಂಡು ಬರುತ್ತದೆ. ಭೈರವನು ತನ್ನ ಮುಡಿಯ (ತಲೆಗಾಲು) ಬಲಭಾಗಕ್ಕೆ ಕಟ್ಟಿಕೊಂಡಿರುವುದರಿಂದ ಇದನ್ನು ವೀರಮುಡಿ ಎಂದು ಕರೆಯುತ್ತಾರೆ. ನಾಲ್ಕು ಕೈಗಳಿರುವ ಭೈರವ ಮೂರ್ತಿಯನ್ನು ಸಾಮಾನ್ಯವಾಗಿ ರಾಜಸಿಕ ಭೈರವ ಎಂದು ಸಂಪ್ರದಾಯದಲ್ಲಿ ಗುರುತಿಸಲಾಗುತ್ತದೆ. ಈ ಮೂರ್ತಿ ಭೈರವನ ವೈಶಿಷ್ಟ್ಯಪೂರ್ಣ ಶಿಲ್ಪಕಲೆಯನ್ನು ಮತ್ತು ವೈದಿಕ ಧಾರ್ಮಿಕ ಸಂಕೇತಗಳನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ.

## ವೀರಭದ್ರನ ಶಿಲ್ಪ

ವೀರಭದ್ರನು ಶಿವನ ಒಂದು ತೀವ್ರ ಮತ್ತು ಶಕ್ತಿಶಾಲಿ ರೂಪವಾಗಿದ್ದು, ಧರ್ಮಸ್ಥಾಪನೆಗಾಗಿ, ಅನ್ಯಾಯ ಮತ್ತು ದುಷ್ಟರನ್ನು ನಾಶಮಾಡಲು ಬಂದ ದೇವತೆ ಎಂದು ಗಣನೀಯ. ಈ ಶಿಲ್ಪದಲ್ಲಿ ಅವನು ಚತುರ್ಭುಜರೂಪದಲ್ಲಿ ಚಿತ್ರಣಗೊಂಡಿದ್ದು, ಇದು ಸಾಮಾನ್ಯವಾಗಿ ಶಕ್ತಿಯ ಸಂಕೇತವಾಗಿದೆ. ಮೇಲಿನ ಬಲ ಕೈಯಲ್ಲಿ ಹಿಡಿದಿರುವ ಬಾಣವು ವೀರಭದ್ರನ ಯುದ್ಧಶೀಲತೆಯನ್ನು ಸೂಚಿಸುತ್ತದೆ. ಬಿಲ್ಲು (ಕತ್ತಿ ಅಥವಾ ತಲವಾರು) ಹಿಡಿದ ಎಡ ಕೈ ಶಕ್ತಿಯ ಮತ್ತು ನಿರ್ಣಯದ ಸಂಕೇತ. ಕೆಳಗಿನ ಕೈಗಳು ತೃಟಿತಾಕಾರದ ಸ್ಥಿತಿಯಲ್ಲಿ ಇರವು ಧಾರ್ಮಿಕ ಅಥವಾ ಯುದ್ಧಾತ್ಮಕ ಭಾವವನ್ನು ಪ್ರತಿಬಿಂಬಿಸುತ್ತವೆ. ಕಿವಿಯ ವೃತ್ತಾಕಾರದ ಕುಂಡಲಗಳು, ಕೊರಳಿನ ಹಾರಗಳು ಹಾಗೂ ತೋಳಿಗೆ ಬಂದುಕೊಂಡಿರುವ

ಮುಂಗೈಕಡಗ (ಒಂದು ರೀತಿಯ ಬಟ್ಟೆ ಅಥವಾ ಆಭರಣ) ದೇವತೆಯ ಸೌಂದರ್ಯ ಮತ್ತು ಮಹತ್ವವನ್ನು ಹೆಚ್ಚಿಸುತ್ತವೆ. ಕಾಲಿಗೆ ಪಾದುಕೆಗಳು ಧರಿಸುವುದು ಆಧ್ಯಾತ್ಮಿಕ ಶುದ್ಧತೆ ಮತ್ತು ದೇವತನಿಗೆ ಸಲ್ಲುವ ಗೌರವವನ್ನು ಸೂಚಿಸುತ್ತದೆ. ವೀರಭದ್ರನು ಬಲ ಭಾಗದಲ್ಲಿ ದಕ್ಷ ಅಂಜಲಿ ಹಸ್ತದಿಂದ ನಿಂತಿರುವುದು (ಹಸ್ತವನ್ನು ಮೊನಕಾಲಿನ ಕಡೆ ತಗ್ಗಿಸಿ ನಮಸ್ಕಾರ ಅಥವಾ ಪ್ರಣಾಮ), ಶಕ್ತಿಶಾಲಿ ದೇವತೆಯಾದರೂ ಭಕ್ತರೊಡನೆ ಆತ್ಮೀಯತೆಯ ಸಂವೇದನೆಯನ್ನು ತೋರಿಸುತ್ತದೆ. ಇದು ಶಕ್ತಿಯೊಂದಿಗೆ ಸಹಾನುಭೂತಿಯ ಸಮನ್ವಯವನ್ನು ಸೂಚಿಸುತ್ತದೆ. ಶಿಲ್ಪದ ಗಾತ್ರ (3 ಅಡಿ) ಮತ್ತು ಅದರ ಸೂಕ್ಷ್ಮ ಅಲಂಕರಣೆಗಳು, ಕಾಲದ ಪ್ರಾಚೀನ ಶಿಲ್ಪಕಲೆ ತಂತ್ರಗಳನ್ನು ವ್ಯಕ್ತಪಡಿಸುತ್ತವೆ. ವೀರಭದ್ರನ ಶಿಲ್ಪವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಅರ್ಥದಲ್ಲಿ ಮಹತ್ವಪೂರ್ಣವಾಗಿದ್ದು, ಪೂರ್ವಭಾಗದ ದೇವಾಲಯಗಳ ಶಿಲ್ಪಕಲೆಯ ವಿಶಿಷ್ಟ ಉದಾಹರಣೆಯಾಗಿದೆ. ಇಂತಹ ಶಿಲ್ಪಗಳು ಪ್ರಾಚೀನ ಭಾರತೀಯ ದೇವಾಲಯಗಳಿಗೆ ವಿಶೇಷ ವೈಶಿಷ್ಟ್ಯವನ್ನು ನೀಡುತ್ತವೆ ಮತ್ತು ಇವುಗಳ ಸಂರಕ್ಷಣೆ, ಅಧ್ಯಯನವು ನಮ್ಮ ಸಂಸ್ಕೃತಿ ಮತ್ತು ಇತಿಹಾಸದ ಅರಿವನ್ನು ವಿಸ್ತರಿಸಲು ಬಹುಮೂಲ್ಯವಾಗಿದೆ.

**ನಂದಿ ಮೂರ್ತಿ**

ಇಲ್ಲಿ ಒಟ್ಟು ಐದು ನಂದಿ ಮೂರ್ತಿಗಳಿವೆ. ಅವುಗಳ ಗಾತ್ರ ಒಂದೇ ಸಮಮಟ್ಟದಲ್ಲಿಲ್ಲ. ಮರದ ಕೆಳಗೆ ಇತರೆ ಮೂವರು ಮೂರ್ತಿಗಳ ಜೊತೆಗೆ ನಾಲ್ಕು ನಂದಿಗಳು ಇರುತ್ತದೆ. ಆದರೆ ಒಂದು ನಂದಿ ಮೂರ್ತಿಯನ್ನು ಮಲ್ಲಿಕಾರ್ಜುನ ದೇವಾಲಯದ ಬೆಟ್ಟ ಹತ್ತುವಾಗ ಎಡಭಾಗದ ಮಂಟಪದಲ್ಲಿ ಸ್ಥಾಪಿಸಲಾಗಿದೆ. ಮರದ ಕೆಳಗೆ ಇರುವ ನಂದಿ ಶಿಲ್ಪಗಳು ಹೆಚ್ಚಿನ ಅಲಂಕಾರವಿಲ್ಲದೆ ಸರಳ ಮತ್ತು ಸ್ಥಿರ ಸ್ವರೂಪದಲ್ಲಿ ಕಲೆ ತೋರಿಸುತ್ತವೆ. ಮಂಟಪದಲ್ಲಿರುವ ನಂದಿ ಮೂರ್ತಿಯು ತನ್ನ ತಲೆಯನ್ನು ವಿನೀತ ಭಾವದಿಂದ ಎತ್ತಿಕೊಂಡಿದ್ದು, ಬಲಕಾಲನ್ನು ಹಿಂದಕ್ಕೆ ಮಡಚಿ ಎಡ ಭಾಗಕ್ಕೆ ಬಾಗಿ ಮಲಗಿರುವ ಸ್ಥಿತಿಯಲ್ಲಿದೆ. ಈ ನಂದಿಯ ಮೇಲೆ ಹಣೆಪಟ್ಟಿ, ಕೊರಳಿನಲ್ಲಿ ಗಂಟೆ ಮತ್ತು ಗೆಜ್ಜೆ ಸರಗಳಿಂದ ಅಲಂಕಾರಿಸಲಾಗಿದೆ. ಕಾಲಿನಲ್ಲಿ ಕಾಲ್ಕಡಗಗಳಂತೆ ರೂಪಿಸಲಾದ ಗೆಜ್ಜೆಯನ್ನು ಕಟ್ಟಿಕೊಂಡಿದ್ದು, ಮೈ ಮೇಲೆಯೂ ಗೆಜ್ಜೆಯ ಸರವಿದ್ದು, ನಂದಿಯ ಶಿಲ್ಪದಲ್ಲಿ ವಿಶಿಷ್ಟ ಅಲಂಕಾರ ಮತ್ತು ಶಿಲ್ಪಕಲೆ ಕಂಡುಬರುತ್ತದೆ. ಈ ರೀತಿಯ ನಂದಿ ಮೂರ್ತಿಗಳು ದೇವಾಲಯಗಳ ಪ್ರವೇಶದ ಮುಂಭಾಗದಲ್ಲಿ ದೇವತೆಯ ಸೇವಕನಾಗಿ, ಶಿಲ್ಪಕಲೆ ಮತ್ತು ಧಾರ್ಮಿಕ ಆಚಾರಗಳ ಸಾಂಸ್ಕೃತಿಕ ಮಹತ್ವವನ್ನು ಪ್ರತಿಬಿಂಬಿಸುತ್ತವೆ.

## ಗಣೇಶ ಮೂರ್ತಿಗಳು

ಗಣೇಶ ಮೂರ್ತಿಗಳು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಬಲಗೈಯಲ್ಲಿ ಅಂಕುಶ, ಮೇಲಿನ ಎಡಗೈಯಲ್ಲಿ ಪಾಷ (ಹಸಿವಿಕ್ಕುವ ಸರಪಳಿ), ಕೆಳಗಿನ ಎಡಗೈಯಲ್ಲಿ ಪಾನಪಾತ್ರೆಯನ್ನು ಹಿಡಿದಿದ್ದಾರೆ. ಕೆಳಗಿನ ಬಲಗೈ ತೃಟಿತ ಸ್ಥಿತಿಯಲ್ಲಿದ್ದು, ಆ ಕೈಯಲ್ಲಿ ಹಿಡಿದಿರುವ ಆಯುಧ ಅಥವಾ ಮುದ್ರೆಯನ್ನು ಗುರುತಿಸುವುದು ಕಷ್ಟವಾಗಿದೆ. ಗಣೇಶ ಮೂರ್ತಿಗಳು ಕಿರೀಟ ಮುಕುಟವನ್ನು ಧರಿಸಿರುವುದು ಮತ್ತು ದೇಹದ ಮೇಲೆ ವಿವಿಧ ಬಗೆಯ ಆಭರಣಗಳಿಂದ ಅಲಂಕೃತವಾಗಿವೆ. ಕೈ ಮತ್ತು ಕಾಲುಗಳಲ್ಲಿ ಕಡಗಗಳನ್ನು ಹಾಕಿಕೊಂಡಿರುವುದು ಗಮನಾರ್ಹ. ಈ ಮೂರ್ತಿಗಳಲ್ಲಿ ಒಂದು ವಿಭಿನ್ನವಾಗಿದ್ದು, ಅದರ ಕಿರೀಟದ ಮೇಲೆ ದೊಡ್ಡ ಕಣ್ಣುಗಳನ್ನು ಕೆತ್ತನೆಗೆ ಒಳಪಡಿಸಲಾಗಿದೆ. ಈ ಮೂರ್ತಿಯ ಪಾದದ ಬಳಿಯಲ್ಲಿ ಗಣೇಶನ ವಾಹನ ಇಲಿ ಇರುವುದೂ ವಿಶೇಷವಾಗಿದೆ. ಈ ದೊಡ್ಡ ಕಣ್ಣುಗಳು ಮೂರ್ತಿಯ ಅಲಂಕರಣವನ್ನು ವಿಶಿಷ್ಟವಾಗಿ ಮಾಡಿವೆ.

## ತೀರ್ಥಂಕರನ ವಿಗ್ರಹ

ಸುಮಾರು ಮೂರು ಅಡಿ ಎತ್ತರದ ಈ ವಿಗ್ರಹವು ಪದ್ಮಾಸನದಲ್ಲಿ ಕುಳಿತಿರುವ ಭಂಗಿಯನ್ನು ತೋರಿಸುತ್ತದೆ. ಶಿರ ಮತ್ತು ಕೈಗಳು ತೃಡಿತವಾಗಿವೆ. ಸುಮಾರು 20 ವರ್ಷಗಳ ಹಿಂದೆ ಬೀರೂರಿನ ಶ್ರೀಇಸ್ಮೈಲ್ ಅವರು ಇಲ್ಲಿ ಕ್ಷೇತ್ರ ಕಾರ್ಯ ಮಾಡುವಾಗ, ಈ ಸ್ಥಳದಲ್ಲಿ ಜೈನ ಬಸದಿ ಇದ್ದು, ಈಗ ಅದು ಶಿಥಿಲಗೊಂಡಿದೆ ಎಂಬ ಮಾಹಿತಿ ನೀಡಿದ್ದಾರೆ. ಪ್ರಸ್ತುತ ಯಾವುದೇ ಅವಶೇಷಗಳು ಕಂಡುಬಾರದಿದ್ದರೂ, ತೀರ್ಥಂಕರರ ಮೂರ್ತಿಯ ಉಪಸ್ಥಿತಿಯಿಂದಲೇ ಈ ಸ್ಥಳ ಜೈನ ಬಸದಿಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈ ಮೂರ್ತಿಗಳು ಮತ್ತು ವಿಗ್ರಹಗಳು ಈ ಪ್ರದೇಶದ ಧಾರ್ಮಿಕ ವೈವಿಧ್ಯತೆ ಮತ್ತು ಐತಿಹಾಸಿಕ ಮಹತ್ವವನ್ನು ಪ್ರತಿಬಿಂಬಿಸುತ್ತವೆ ಹಾಗೂ ಇವುಗಳ ಸಂರಕ್ಷಣೆ ಮತ್ತು ಅಧ್ಯಯನ ಅತ್ಯಂತ ಅಗತ್ಯವಾಗಿದೆ.

## ವೀರಗಲ್ಲು

ವೀರಗಲ್ಲು ಮೂರು ಹಂತಗಳನ್ನು ಒಳಗೊಂಡಿದೆ. ಮೊದಲ ಹಂತದಲ್ಲಿ ಕುದುರೆಯ ಮೇಲೆ ಏರಿಕೊಂಡಿರುವ ವೀರರು ಈಟಿ, ಖಡ್ಗ ಮತ್ತು ಗುರಾಣಿಗಳನ್ನು ಹಿಡಿದು ಪರಸ್ಪರ ಹೋರಾಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಹೋರಾಟದ ತೀವ್ರತೆ ಮತ್ತು ಯುದ್ಧಶೀಲತೆಯನ್ನು ಈ ಹಂತದಲ್ಲಿ ನೋಡಬಹುದು. ಮಧ್ಯದ ಹಂತದಲ್ಲಿ ಹೋರಾಟದಲ್ಲಿ ಗಾಯಗೊಂಡ ಅಥವಾ ಮಡಿದ ವೀರನನ್ನು ಸಕಿಯರು (ಸಹಾಯಕರು) ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಇದು ಹೋರಾಟದ ನಂತರದ ಸ್ಥಿತಿಯನ್ನು ಮತ್ತು ಶೌರ್ಯದ ಮಹತ್ವವನ್ನು ಸೂಚಿಸುತ್ತದೆ. ಮೂರನೆಯ ಹಂತದಲ್ಲಿ ಕೈಲಾಸದಲ್ಲಿ ಯತ್ತಿ

(ಯೋಗಿ) ಶಿವಲಿಂಗಕ್ಕೆ ಅಭಿಷೇಕ (ಪೂಜೆ) ಮಾಡುವ ದೃಶ್ಯವಿದೆ. ಅದರ ಮುಂದೆ ವೀರನು ತನ್ನ ಕೈಗಳನ್ನು ಮುಗಿದು (ನಮನವಾಗಿ) ನಿಂತಿರುವಂತೆ ಶಿಲ್ಪವನ್ನು ಕೆತ್ತಲಾಗಿದೆ. ಶಿವಲಿಂಗದ ಎದುರು ಶಿವನ ವಾಹನ ನಂದಿಯ ಶಿಲ್ಪವೂ ಸ್ಥಾಪಿಸಲಾಗಿದೆ. ಈ ವೀರಗಲ್ಲು ಶೌರ್ಯ, ಧಾರ್ಮಿಕ ಭಕ್ತಿ ಮತ್ತು ಯೋಗಾಭ್ಯಾಸದ ತ್ರೈಮಾಸಿಕ ದೃಶ್ಯಗಳನ್ನು ಸಮನ್ವಯಗೊಳಿಸಿರುವ ವಿಶಿಷ್ಟ ಶಿಲ್ಪಕಲೆ ಕಾರ್ಯವಾಗಿದೆ. ಇದು ಪ್ರಾಚೀನ ಕಾಲದ ಹೋರಾಟ ಮತ್ತು ಧಾರ್ಮಿಕ ಆಧ್ಯಾತ್ಮದ ಸಂಕೇತಗಳನ್ನೂ ಪ್ರತಿಬಿಂಬಿಸುತ್ತದೆ.

**ಸಪ್ತಮಾತೃಕೆಯ ಶಿಲ್ಪ**

ಈ ಶಿಲ್ಪವು ನಂದಿ ಮಂಟಪದ ಒಳಭಾಗದಲ್ಲಿದೆ. ಇಂದಿನ ಪೂಜಾ ವಿಧಿ ವಿಧಾನಗಳಿಂದ ಇದರ ಸೂಕ್ಷ್ಮತೆಯಾದ ಅಧ್ಯಯನ ಅತ್ಯಂತ ಅವಶ್ಯಕವಾಗಿದೆ. ಪುರಾಣಗಳು ಮತ್ತು ಇತರೆ ಧಾರ್ಮಿಕ ಗ್ರಂಥಗಳಲ್ಲಿ ಸಪ್ತಮಾತ್ರಿಕ್ಕೆಯ ರೂಪ ಮತ್ತು ಮಹತ್ವವನ್ನು ವಿವರಿಸಲಾಗಿದ್ದು, ಈ ಶಿಲ್ಪವು ಅವುಗಳ ಆಧಾರದಲ್ಲಿ ರೂಪುಗೊಂಡಿದೆ. ಸಪ್ತಮಾತೃಕೆಯು ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಹಿ, ಇಂದ್ರಾಣಿ ಮತ್ತು ಚಾಮುಂಡಿ ಎಂಬ ದೇವತೆಗಳ ರೂಪಗಳಾಗಿ ಗುರುತಿಸಲಾಗುತ್ತದೆ. ಈ ದೇವತೆಗಳು ಶಕ್ತಿ ದೇವತೆಗಳಾಗಿ ಪರಿಗಣಿಸಲ್ಪಡುವುವು. ಬ್ರಹ್ಮ, ಮಹೇಶ್ವರ, ಕುಮಾರ, ವಿಷ್ಣು, ವರಹ, ಇಂದ್ರ, ಯಮ ದೇವತೆಗಳ ಶಕ್ತಿ ರೂಪಗಳೆಂದು ಈ ಸಪ್ತಮಾತೃಕೆಯನ್ನು ಕರೆಯಬಹುದು. ಇಂತಹ ಶಕ್ತಿ ದೇವತೆಯ ರೂಪದಲ್ಲಿ ಸಪ್ತಮಾತ್ರಿಕೆಯ ಶಿಲ್ಪಗಳನ್ನು ದೇವಾಲಯಗಳ ನವರಂಗದ ಒಂದು ಭಾಗದಲ್ಲಿ, ವಿಶೇಷವಾಗಿ ಪಟ್ಟಿಗೆಗಳಲ್ಲಿ ಕಾಣಬಹುದು. ಇವು ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಮಹತ್ವಪೂರ್ಣವಾಗಿದ್ದು, ದೇವಾಲಯಗಳ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯೊಡನೆ ಸಾಂದರ್ಭಿಕವಾಗಿ ಸಂಬಂಧ ಹೊಂದಿವೆ. ಈ ಶಿಲ್ಪಗಳ ಅಧ್ಯಯನವು ಪೌರಾಣಿಕ ಶಕ್ತಿ ದೇವತೆಗಳ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಅರ್ಥಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ದೇವಾಲಯಗಳು ಮತ್ತು ಶಿಲಾಮೂರ್ತಿಗಳು ಸಮಕಾಲೀನ ಇತಿಹಾಸ, ಧರ್ಮ ಮತ್ತು ಸಂಸ್ಕೃತಿಯ ಕುರಿತು ಅಮೂಲ್ಯ ಮಾಹಿತಿಗಳನ್ನು ನೀಡುವ ಪ್ರಮುಖ ಆಕಾರಗಳಾಗಿವೆ. ಪ್ರಾಚೀನ ಕಾಲದಲ್ಲಿ ದೇವಾಲಯ ನಿರ್ಮಾಣಕ್ಕೆ ಹೆಚ್ಚಿನ ಸಮಯ, ಸಂಪನ್ಮೂಲ ಮತ್ತು ತಾಂತ್ರಿಕ ನೈಪುಣ್ಯ ಬೇಕಾಗಿತ್ತು; ಆದ್ದರಿಂದ ಈ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಕೇತಗಳ ರಕ್ಷಣೆ ಅತ್ಯಂತ ಮುಖ್ಯವಾಗಿದೆ. ಪ್ರಸ್ತುತ ಅವಧಿಯಲ್ಲಿ ಇವುಗಳ ಸಂರಕ್ಷಣೆ ಮತ್ತು ವೈಜ್ಞಾನಿಕ ಅನ್ವೇಷಣೆ ಅವಶ್ಯಕವಾಗಿದೆ, ಏಕೆಂದರೆ ಹಲವು ದೇವಾಲಯಗಳು ಮತ್ತು ಶಿಲ್ಪಗಳು ನಿರ್ಲಕ್ಷ್ಯದಿಂದ ವಿನಾಶದ ಅಂಚಿಗೆ ಬಂದಿವೆ. ಇವುಗಳ ಸರಿಯಾದ ಮಾಹಿತಿ ಇಲ್ಲದೆ ಈ ಐತಿಹಾಸಿಕ ಶ್ರೀಮಂತಿಕೆಯನ್ನು ಕಾಪಾಡುವುದು ಕಷ್ಟ. ಆದ್ದರಿಂದ, ಕ್ರಮಬದ್ಧ ಅಧ್ಯಯನದ ಮೂಲಕ ಈ ದೇವಾಲಯಗಳು ಮತ್ತು ಶಿಲ್ಪಗಳ ವೈಶಿಷ್ಟ್ಯತೆ ಮತ್ತು ಮಹತ್ವವನ್ನು ಸ್ಥಳೀಯ ಜನತೆ ಮತ್ತು ಜನಸಮುದಾಯದ ಮೇಲೆ ತಿಳಿಸುವ ಮೂಲಕ ಸಂರಕ್ಷಣೆಯನ್ನು

ಪ್ರೇರೇಪಿಸುವುದು ಅತ್ಯಂತ ಅಗತ್ಯ. ಸಾರ್ವಜನಿಕ ಜಾಗೃತಿ, ಸಂಶೋಧನೆ ಮತ್ತು ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಕಾರದಿಂದ ಈ ಸಾಂಸ್ಕೃತಿಕ ಧಾತುಗಳನ್ನು ಉಳಿಸುವ ಕೆಲಸ ನಿರ್ವಹಿಸಬೇಕಾಗಿದೆ. ಇದರಿಂದ ಪ್ರಾದೇಶಿಕ ಇತಿಹಾಸ ಮತ್ತು ಧಾರ್ಮಿಕ ಪರಂಪರೆ ಭವಿಷ್ಯದಲ್ಲಿ ಜೀವಂತವಾಗಿರುತ್ತದೆ.

## ಉಪಸಂಹಾರ

ಕೆರೆಸಂತೆ ಮತ್ತು ಹಿಮಗಿರಿಯ ಪ್ರದೇಶದ ದೇವಾಲಯಗಳು ಮತ್ತು ಶಿಲ್ಪಗಳು ಪ್ರಾಚೀನ ಕಾಲದ ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಜೀವನದ ಜೀವಂತ ಸಾಕ್ಷ್ಯಗಳಾಗಿವೆ. ಶಾಸನಗಳು ದೇವಾಲಯಗಳ ಸ್ಥಾಪನೆ, ದಾನ ಮತ್ತು ಆಚಾರಗಳ ಕುರಿತು ವಿವರಿಸುವುದರಿಂದ ಈ ಪ್ರದೇಶದ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತವೆ. ವೀರಗಲ್ಲು, ಸಪ್ತಮಾತ್ರಿಕೆ, ಗಣೇಶ ಮತ್ತು ಭೈರವ ಮೂರ್ತಿಗಳು ಈ ಪ್ರದೇಶದ ಶಿಲ್ಪಕಲೆಯ ವೈವಿಧ್ಯತೆಯನ್ನು ಮತ್ತು ತಾಂತ್ರಿಕ ನೈಪುಣ್ಯವನ್ನು ಪ್ರತಿಬಿಂಬಿಸುತ್ತವೆ. ಇಂತಹ ದೇವಾಲಯಗಳು ಮತ್ತು ಶಿಲ್ಪಗಳು ನಮ್ಮ ಐತಿಹಾಸಿಕ ಪರಂಪರೆಯ ಅಮೂಲ್ಯ ಅಂಗಗಳಾಗಿದ್ದು, ಅವುಗಳ ಶಿಥಿಲ ಮತ್ತು ನಾಶವಾಗುವ ಸ್ಥಿತಿಯನ್ನು ತಡೆಯಲು ತಕ್ಷಣವೇ ಸಂರಕ್ಷಣಾ ಕ್ರಮಗಳು ಅಗತ್ಯ. ಸ್ಥಳೀಯ ಜನತೆ ಮತ್ತು ಸಂಶೋಧಕರ ಸಹಕಾರದಿಂದ ಈ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವುದು ಮತ್ತು ಮುಂದಿನ ಪೀಳಿಗೆಗೆ ಸಾಗಿಸುವುದು ಮುಖ್ಯ. ಈ ಕ್ಷೇತ್ರದಲ್ಲಿ ಸಮಗ್ರ ಅಧ್ಯಯನ ಮತ್ತು ಮಾಹಿತಿ ಸಂಗ್ರಹವು ಈ ದೇವಾಲಯಗಳ ವೈಶಿಷ್ಟ್ಯತೆ ಮತ್ತು ಮಹತ್ವವನ್ನು ಜನರಲ್ಲಿ ಅರಿವು ಮೂಡಿಸುವುದರಲ್ಲಿ ಸಹಾಯಕವಾಗುತ್ತದೆ. ಹೀಗೆ, ನಮ್ಮ ಸಾಂಸ್ಕೃತಿಕ ಶ್ರೇಷ್ಠತೆ ಮತ್ತು ಧಾರ್ಮಿಕ ಐತಿಹಾಸಿಕತೆಯನ್ನು ಬಾಳಿಸುವಲ್ಲಿ ಈ ಪ್ರಾಚೀನ ದೇವಾಲಯಗಳು ಮತ್ತು ಶಿಲ್ಪಗಳು ಅಪಾರ ಪಾತ್ರ ವಹಿಸುತ್ತವೆ.

## ಆಕರ ಗ್ರಂಥಗಳು


- ಡಾ.ಎಂ.ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2008
- ಚಿಕ್ಕಮಗಳೂರು ಜಿಲ್ಲಾ ದರ್ಶನ
- ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–12, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2003
- ಕು.ಸ.ಅಪರ್ಣ, ದೇವಾಲಯ ವಾಸ್ತು ಶಿಲ್ಪ ಪರಿಚಯ, ಪ್ರಸಾರಂಗ, ಕನ್ನಡ ವಿವಿ, ಹಂಪಿ, 1999
- ಎಸ್.ಕೆ.ರಾಮಚಂದ್ರರಾವ್, ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ, ಪ್ರಸಾರಂಗ, ಬೆಂಗಳೂರು ವಿವಿ, ಬೆಂಗಳೂರು, 2012